ಸಿ.ಸಿ.ನಂ.17/2022

ಪಿ.ಡಬ್ಲ್ಯೂ-1

ಸಿ.ಡಬ್ಲ್ಯೂಃ1

ದಿನಾಂಕ.06-02-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

<u>**ಪಾಟಿ ಸವಾಲುಃ**</u> ಆರೋಪಿ ಪರ ಶ್ರೀ ಎನ್ ಆರ್ ಎನ್ ವಕೀಲರಿಂದಃ

12. ಆರ್ ಎಫ್ ಒ ರವರಿಗೆ ಮಾಹಿತಿ ಬಂದಾಗ ಅವರು ಕಚೇರಿಯಲ್ಲಿ ಇದ್ದರು. ಆರ್ ಎಫ್ ಒ ರವರು ಪೋಲಿಸ್ ಇನ್ಸಪೆಕ್ಟರ್ ರವರ ಕೇಡರ್ ಗೆ ಬರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರ್ ಎಫ್ ಒ ರವರಿಗೆ ನಮ್ಮ ಜೊತೆ ಬಂದು ಪ್ರಕರಣ ದಾಖಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ಆ ದಿನ ಅವರಿಗೆ ಬೇರೆ ಎನು ಕೆಲಸ ಇತ್ತಾ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ಬಾತ್ಮಿ ಬಂದ ಮೇಲೆ ನಮ್ಮನ್ನು ನೀವೆ ದಾಳಿಗೆ ಹೋಗಿ ಹಾಗೂ ಅವರಿಗೆ ಬೇರೆ ಕೆಲಸ ಇತ್ತು ಎಂದು ಹೇಳಿದ್ದಾರಾ ಎಂದರೆ ಸಾಕ್ಷಿ ನಮಗೆ ದಾಳಿ ಮಾಡಲು ಹೇಳಿದ್ದಾರೆ, ಅದರೆ ಅವರಿಗೆ ಎನು ಕೆಲಸ ಇತ್ತು ಎಂದು ನಮಗೆ ಹೇಳಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿದಂತ ದಾಳಿಗೆ ಮುಂಚೆ ನವಗದ್ದೆಗೆ ಬಹಳ ಸಲ ಭೇಟಿ ಕೊಟ್ಟಿರುತ್ತೇನೆ. ಆಗ ನವಗದ್ದೆಗೆ ಉಪ ವಲಯ ಅರಣ್ಯಾಧಿಕಾರಿಯಾಗಿ ನಾನೆ ಕರ್ತವ್ಯ ನಿರ್ವಹಿಸುತ್ತಿದ್ದೆ.

13. ಸರ್ವೆ ನಂಬರ 26 ಬ್ಲಾಕ್ ನಂಬರ 38 ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದುನನಗೆ ಗೊತ್ತಿಲ್ಲ. ಬಾಳೆಗುಳಿ ಅರಣ್ಯ ಪ್ರದೇಶಕ್ಕಿಂತ ನಂತರ ಬೊಗ್ರಿಬೈಲ, ಆನಂತರ ನವಗದ್ದೆ ಅರಣ್ಯ ಪ್ರದೇಶ ಬರುತ್ತದೆ. ಬಾಳೆಗುಳಿ ಅರಣ್ಯ ಪ್ರದೇಶದ ಸರ್ವೆ ನಂಬರ 2 ಬ್ಲಾಕ್ ನಂ.44 ಆಗಿರುತ್ತದೆ. ಆ ಸರ್ವೆ ನಂಬರನ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಬಾಳೆಗುಳಿ ಅರಣ್ಯ ಪ್ರದೇಶದಲ್ಲಿ ಅರಣ್ಯ ಅತಿಕ್ರಮಣ ಮಾಡಿ

ಮನೆ ಕಟ್ಟಿ ವಾಸ್ತವ್ಯ ಇರುವ ಸುಮಾರು 100 ಮನೆಗಳು ಇವೆ. ಬ್ರೊಗ್ರಿಬೈಲ್‌ನ ಅರಣ್ಯ ಸರ್ವೆ ನಂಬರ 50 ಎ ಆಗಿರುತ್ತದೆ. ಅದರ ವಿಸ್ತೀರ್ಣ ಸ್ಪಷ್ಟವಾಗಿ ಈಗ ನೆನಪಿಲ್ಲ, ಆದರೆ ಅಂದಾಜು 500 ಎಕರೆ ಇದೆ. ಮೇಲ್ಕಂಡ ಸರ್ವೆ ನಂಬರ 2 ರ ಉತ್ತರ ದಿಕ್ಕಿಗೆ ಸರ್ವೆ ನಂಬರ 50 ಎ ಬರುತ್ತದೆ. ಸರ್ವೆ ನಂಬರ 50 ಎ ಯ ಪೂರ್ವ ದಿಕ್ಕಿಗೆ ನವಗದ್ದೆಯ ಸರ್ವೆ ನಂಬರ 26 ಬರುತ್ತದೆ. ಆದರೆ ಅದು ಹೊಂದಿಕೊಂಡು ಇಲ್ಲ. ಸರ್ವೆ ನಂಬರ 50 ಎ ಗೆ ನವಗದ್ದೆಯ ಸರ್ವೆ ನಂಬರ 25 ಹೊಂದಿಕೊಂಡಿದ್ದು, ಅದರ ನಂತರ ನವಗದ್ದೆಯ ಸರ್ವೆ ನಂಬರ 26 ಬರುತ್ತದೆ. ಅರಣ್ಯ ಸರ್ವೆ ನಂಬರ 25 ರಲ್ಲಿ 4 ರಿಂದ 5 ಅತಿಕ್ರಮಣದಾರರು ವಾಸ್ತವ್ಯ ಇರುವ ಮನೆಗಳು ಇವೆ. ಅರಣ್ಯ ಸರ್ವೆ ನಂಬರ 26 ರಲ್ಲಿ ಅಂದಾಜು 10 ಮನೆಗಳು ಇವೆ. ಆ ರೀತಿ ಅತಿಕ್ರಮಣ ಮಾಡಿ ಮನೆ ಕಟ್ಟಿಕೊಂಡಿರುವವರು ಅರಣ್ಯಾಧಿಕಾರಿಗಳನ್ನು ಗುರುತಿಸುತ್ತಾರೆ.

14. ಸಾಮಾನ್ಯವಾಗಿ ಹಳ್ಳಿಗಳಲ್ಲಿ ವಿಲೇಜ್ ಫಾರೆಸ್ಟ್ ಕಮಿಟಿ ಇರುತ್ತದೆ ಎಂದರೆ ಸರಿ. ಆ ಕಮಿಟಿಗೆ ಆ ಹಳ್ಳಿಯ ಒಬ್ಬ ಗಣ್ಯ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಹಾಗೂ ಉಪ ವಲಯ ಅರಣ್ಯಾಧಿಕಾರಿಯನ್ನು ಕಾರ್ಯದರ್ಶಿಯಾಗಿ ಮಾಡಲಾಗುತ್ತದೆ ಎಂದರೆ ಸರಿ. ನವಗದ್ದೆಯಲ್ಲಿ ಆ ಕಮಿಟಿಯಲ್ಲಿ ಆಗ ಅಧ್ಯಕ್ಷರು ಬಿ.ಡಿ.ಗೌಡ ಆಗಿದ್ದರು. ಅವರು ಅರಣ್ಯ ಅತಿಕ್ರಮಣದಾರರಾಗಿರುವುದಿಲ್ಲ. ಅವರ ಮಾಲ್ಕಿ ಜಮೀನು ಇರುತ್ತದೆ. ಆ ಕಮಿಟಿಗೆ ಕಾರ್ಯದರ್ಶಿ ಮತ್ತು ಅಧ್ಯಕ್ಷರನ್ನು ಹೊರತು ಪಡಿಸಿ 10 ಮಂದಿ ಸದಸ್ಯರಿರುತ್ತಾರೆ ಎಂದರೆ ಸರಿ. 11 ಸದಸ್ಯರು ಕೂಡ ನಮ್ಮ ಒಡನಾಟದಲ್ಲಿ ಇರುತ್ತಾರೆ ಎಂದರೆ ಸರಿ.

ಸಿ.ಸಿ.ನಂ.17/2022
ಪಿ.ಡಬ್ಲ್ಯೂ-1
ಸಿ.ಡಬ್ಲ್ಯೂ:1

15. ಆರ್ ಎಫ್ ಒ ರವರಿಗೆ ಮಧ್ಯಾಹ್ನ 12-30 ಘಂಟೆಗೆ ಮಾಹಿತಿ ಬಂದಿರುತ್ತದೆ. ಆಗ ನಾವೆಲ್ಲಾ ಅವರವರ ವಲಯದಲ್ಲಿ ಕರ್ತವ್ಯದಲ್ಲಿ ಇದ್ದೆವು. ಪ್ರಥಮವಾಗಿ ಮಾಹಿತಿಯನ್ನು ನನಗೆ ತಿಳಿಸಿದರು. ಮಾಹಿತಿ ಪಡೆದುಕೊಂಡ ಅಧಿಕಾರಿಯೇ ಸಾಮಾನ್ಯವಾಗಿ ಸಿಬ್ಬಂದಿಗಳೊಡಗೂಡಿ ಆ ಬಗ್ಗೆ ಕಾರ್ಯಚರಣೆಗೆ ಹೋಗುತ್ತಾರೆ ಎಂದರೆ ಸರಿ. ನನಗೆ ಮಾಹಿತಿ ಹೇಳಿದ ನಂತರ ಉಳಿದ ಸಿಬ್ಬಂದಿಗಳು ಅಂಕೋಲಾ ಆರ್ ಎಫ್ ಒ ಕಚೇರಿಯಲ್ಲಿ ನನ್ನ ಜೊತೆ ಸೇರಿರುತ್ತಾರೆ. ಚಾ.ಸಾ.2 ಮತ್ತು 3 ರವರು ನಮ್ಮ ಸಂಸ್ಥೆಯ ದಿನಗೂಲಿ ನೌಕರರು. ಚಾ.ಸಾ.2 ರವರು ಆ ದಿನ ಬಾಳೆಗುಳಿ ಹಾಗೂ ಚಾ.ಸಾ.3 ರವರು ಅಲಗೇರಿಯಲ್ಲಿ ಕರ್ತವ್ಯದಲ್ಲಿ ಇದ್ದರು. ಅವರಿಬ್ಬರನ್ನು ಕೂಡ ಆರ್ ಎಫ್ ಒ ಕಚೇರಿಗೆ ನಾನು ಕರೆಸಿದೆ. ಕೋಟೆಬಾವಿಗೆ ಬಾಳೆಗುಳಿಯಿಂದ 10 ಕಿ ಮೀ ದೂರ ಇದೆ. ಕೊಟೆಬಾವಿ ಯಿಂದ ಅಂಕೋಲಾ ಆರ್ ಎಫ್ ಒ ಕಚೇರಿಗೆ 15 ರಿಂದ 20 ಕಿ ಮೀ ದೂರ ಇದೆ.

16. ಉಪ ವಲಯ ಅರಣ್ಯಾಧಿಕಾರಿಗಳು ಕಚೇರಿಯಲ್ಲಿ ಇರುವ ನೊಂದಣಿ ಪುಸ್ತಕದಲ್ಲಿ ಯಾವುದೆ ಹೊರಗಡೆ ಕರ್ತವ್ಯಕ್ಕೆ ಹೋಗುವಾಗ ನಮೂದಿಸಿ ಹೋಗಬೇಕು ಎಂದರೆ ಸರಿಯಲ್ಲ. ಕರ್ತವ್ಯದ ಕಚೇರಿ ಅವಧಿ ಬೆಳಿಗ್ಗೆ 10-00 ರಿಂದ ಸಾಯಂಕಾಲ 5-30 ಘಂಟೆ ತನಕ ಇರುತ್ತದೆ. ನಾವು ಕರ್ತವ್ಯಕ್ಕೆ ಹಾಜರಾಗುವಾಗ ಆರ್ ಎಫ್ ಒ ಕಚೇರಿಗೆ ಬಂದು ಸಹಿ ಮಾಡಿ ಹೋಗಲು ಇರುವುದಿಲ್ಲ, ನೇರವಾಗಿ ನಾವು ಕರ್ತವ್ಯಕ್ಕೆ ಹೋಗುತ್ತೇವೆ. ಶಿರೂರು ಅಂಕೋಲಾ ಆರ್ ಎಫ್ ಒ ಕಚೇರಿಯಿಂದ 10 ರಿಂದ 15 ಕಿ ಮೀ ದೂರದಲ್ಲಿ ಇದೆ ಎಂದರೆ ಸಾಕ್ಷಿ 5 ರಿಂದ 10 ಕಿ ಮೀ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ. ಅಂಕೋಲಾ ಆರ್ ಎಫ್ ಒ ಕಚೇರಿಗೆ ನಾನೆ ಪ್ರಥಮವಾಗಿ ಬಂದಿರುತ್ತೇನೆ. ನಂತರ 5

ನಿಮಿಷದೊಳಗಡೆನೆ ಶಿರೂರು ಶಾಖೆಯವರು ಹಾಗೂ ಕೊಟೆಬಾವಿ ಶಾಖೆಯವರು ಬಂದಿರುತ್ತಾರೆ. ಬಾಳೆಗುಳಿ ಶಾಖೆಯಿಂದ ಆರ್ ಎಫ್ ಒ ಕಚೇರಿಗೆ ನನಗೆ 5 ರಿಂದ 7 ನಿಮಿಷದಲ್ಲಿ ಬಂದು ಮುಟ್ಟಬಹುದು ಎಂದರೆ ಸರಿ. ಕೊಟೆಬಾವಿಯಿಂದ ಬರಬೇಕಾದರೆ ತಗ್ಗು ಎತ್ತರದ ಒರಟು ರಸ್ತೆಯಲ್ಲಿ ಬರಬೇಕು ಎಂದರೆ ಸರಿ.

17. ನಮ್ಮ ಕರ್ತವ್ಯ ಎಂದರೆ ಕಚೇರಿಯಲ್ಲಿ ಇರುವುದು ಮಾತ್ರ ಅಲ್ಲದೆ ಅರಣ್ಯ ಪ್ರದೇಶದಲ್ಲಿ ಗಸ್ತು ಕೂಡ ಮಾಡುವುದು ಇರುತ್ತದೆ ಎಂದರೆ ಸರಿ. ಉಪ ವಲಯದಲ್ಲಿ ಯಾವುದೆ ಗಿಡಗಳು ಕಾಣೆಯಾದರೂ ಕೂಡ ಮೇಲಾಧಿಕಾರಿ ನನ್ನನ್ನು ಪ್ರಶ್ನೆ ಮಾಡುತ್ತಾರೆ ಎಂದರೆ ಸರಿ. ನಾನು ಒಂದರೆಡು ದಿನ ರಜೆ ಹೋದರೆ ಹಾಗೂ ಕೆಲಸದಲ್ಲಿ ಹೋದರೆ ನನ್ನ ಸ್ಥಾನಕ್ಕೆ ಬೇರೆಯವರನ್ನು ನೇಮಿಸವುದಿಲ್ಲ, ಆದರೆ ಚಾಸಾ7 ರವರೆ ನನ್ನ ಪರವಾಗಿ ಕರ್ತವ್ಯದಲ್ಲಿ ಇರುತ್ತಾರೆ.

18. ನಾವೆಲ್ಲರು ಆ ದಿನ ಒಟ್ಟಿಗೆ ಸೇರಿದಾಗ 12-45 ರಿಂದ 1-00 ಘಂಟೆ ಆಗಿರಬಹುದು. ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ. ಉಪ ವಲಯ ಅರಣ್ಯಾಧಿಕಾರಿಗೆ ನಾಲ್ಕು ಚಕ್ರದ ವಾಹನ ನೀಡಿರುವುದಿಲ್ಲ, ಆದರೆ ಕೆಲವರಿಗೆ ದ್ವಿಚಕ್ರ ವಾಹನ ಇಲಾಖೆಯಿಂದ ನೀಡಿರುತ್ತಾರೆ. ನನಗೆ ದ್ವಿಚಕ್ರ ವಾಹನ ಕೂಡ ನೀಡಿರುವುದಿಲ್ಲ. ನಾವು ಸೇರಿದೆವು ಎಂದು ಹೇಳುವ ಎಲ್ಲರಲ್ಲಿ ಚಾ.ಸಾ.2 ಮತ್ತು 3 ರವರನ್ನು ಹೊರತು ಪಡಿಸಿ ದ್ವಿಚಕ್ರ ವಾಹನಗಳು ಇದ್ದವು. ಬಾಳೆಗುಳಿಯಿಂದ ನಾವು ನವಗದ್ದೆಗೆ ಹೊದೇವು ಎಂದು ಹೇಳುವ ಸ್ಥಳ 6 ರಿಂದ 7 ಕಿ ಮೀ ದೂರದಲ್ಲಿ ಇದೆ. ಅಂಕೋಲಾದಿಂದ ನಾವು ಬಾಳೆಗುಳಿಗೆ ಬಂದಾಗ ಮಧ್ಯಾಹ್ನ 1-00 ರಿಂದ 1-15 ಆಗಿರುತ್ತದೆ. ನಿಖರವಾಗಿ ಸಮಯ ಹೇಳಲು

ಆಗುವುದಿಲ್ಲ. ನವಗದ್ದೆಗೆ ಬಂದಾಗ ಮಧ್ಯಾಹ್ನ 1-30 ಆಗಿತ್ತು. ರಾಷ್ಟ್ರೀಯ ಹೆದ್ದಾರಿ 63 ರಲ್ಲಿ 10 ರಿಂದ 20 ಮೀಟರ ದೂರಕ್ಕೆ ಹಾಗೂ ಕಿಲೋಮಿಟರಗೆ ಕಲ್ಲುಗಳನ್ನು ರಸ್ತೆ ಪಕ್ಕದಲ್ಲಿ ನೆಟ್ಟಿದ್ದಾರೆ ಎಂದರೆ ಸಾಕ್ಷಿ 2 ರಿಂದ 3 ಕಿ ಮೀ ದೂರಕ್ಕೆ ಕಲ್ಲುಗಳನ್ನು ನೆಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತ ಸ್ಥಳ, ತಿರುವು ಪ್ರದೇಶ ಹಾಗೂ ದೇವಸ್ಥಾನ ಪ್ರದೇಶಗಳನ್ನು ಫಲಕಗಳ ಮೂಲಕ ರಸ್ತೆ ಪಕ್ಕದಲ್ಲಿ ತೋರಿಸಿರುತ್ತಾರೆ ಎಂದರೆ ಸರಿ.

19. ಪಂಚನಾಮೆಯಲ್ಲಿ ನಮ್ಮ ಜೀಪನ್ನು ನಿಲ್ಲಿಸಿದ ಜಾಗವನ್ನು ಸ್ಪಷ್ಟವಾಗಿ ಎಲ್ಲಿ ಎಂದು ಹೇಳಿಲ್ಲ ಎಂದರೆ ಸರಿ. ನವಗದ್ದೆ ಕ್ರಾಸ್ ನಿಂದ ಬ್ರಿಡ್ಜ್ 10 ಮೀಟರ್ ದೂರದಲ್ಲಿ ಇದೆ. ಆ ಬ್ರಿಡ್ಜ್‌ನ ಹೆಸರು ಗೊತ್ತಿಲ್ಲ. ಆ ಬ್ರಿಡ್ಜ್ ಈಗ ಮುರಿದಿದೆ ಎಂದರೆ ಸರಿ. ಬಾಳೆಗುಳಿಯಿಂದ ಹೋಗುವಾಗ ಪ್ರಥಮವಾಗಿ ನವಗದ್ದೆ ಕಾಲು ದಾರಿ ಬರುತ್ತದೆ, ನಂತರ ಬ್ರಿಡ್ಜ್ ಬರುತ್ತದೆ. ಮೇಲೆ ಹೇಳಿದಂತ ನವಗದ್ದೆ ಕ್ರಾಸ ಕಾಲುದಾರಿಯಾಗಿರುತ್ತದೆ ಹಾಗೂ ನವಗದ್ದೆ ಕ್ರಾಸ್ ಬ್ರಿಡ್ಜ್ ಗಿಂತ ಅರ್ಧ ಕಿ ಮೀ ಮುಂದೆ ಇರುತ್ತದೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಆ ಕ್ರಾಸ್ ಕಂಚಿನಬಾಗಿಲುಗಿಂತ 70 ಮೀಟರ ಹಿಂದಕ್ಕೆ ಬರುತ್ತದೆ. ಆ ಕ್ರಾಸ್ ನಿಂದ ಕಂಚಿನಬಾಗಿಲು ದೇವಸ್ಥಾನ 10 ರಿಂದ 15 ಮೀಟರ ದೂರದಲ್ಲೆ ಇದೆ ಎಂದರೆ ಸರಿಯಲ್ಲ. ಸದರಿ ಕ್ರಾಸ್ ನ ಮುಂದಕಾದಂತೆ ಬಸ್ ನಿಲ್ದಾಣ ಇರುತ್ತದೆ. ಜನವಸತಿ ಇರುವುದರಿಂದ ಅಲ್ಲಿ ಬಸ್ ನಿಲ್ದಾಣ ನಿರ್ಮಿಸಿದ್ದು ಹಾಗೂ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸಾಕ್ಷಿ ಕಡಿಮೆ ಜನ ಸೇರುತ್ತಾರೆ ಎಂದು ನುಡಿಯುತ್ತಾರೆ.

20. ಕಂಚಿನಬಾಗಿಲು ದೇವಸ್ಥಾನಕ್ಕೆ ಸಾಮಾನ್ಯವಾಗಿ ಆ ರಸ್ತೆಯಲ್ಲಿ ಹೋಗುವ ಜನರು ಹಾಗೂ ವಾಹನದಾರರು ಊದಬತ್ತಿ ಕಡ್ಡಿ ಹಚ್ಚಿ ಮುಂದಕ್ಕೆ ಹೋಗುತ್ತಾರೆ ಎಂದರೆ ಸರಿ. ನಾವು ಮೇಲೆಹೇಳಿದಂತ ನವಗದ್ದೆ ಕಾಲು ದಾರಿಗಿಂತಲೂ ಹಿಂದಕ್ಕೆ ನಿಂತಿದ್ದೆವು. ಸಾಧಾರಣ 50 ಮೀಟರ ಹಿಂದಕ್ಕೆ ನಿಂತಿದ್ದೆವು. ಅಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿರುವ ಪ್ರದೇಶ ಎಂದರೆ ಸರಿ. ಸದರಿ ನವಗದ್ದೆ ಕಾಲು ದಾರಿ ಪ್ರವೇಶ ಮಾಡುವ ಪೂರ್ವದಲ್ಲಿ ಅರ್ಧ ಚಂದ್ರಾಕೃತಿಯ ಕ್ರಾಸ್‌ಗಳು ಎರಡು ಬರುತ್ತವೆ ಎಂದರೆ ಸರಿ. ಆ ಎರಡು ಕ್ರಾಸ್‌ಗಳನ್ನು ದಾಟಿದ ನಂತರ ನವಗದ್ದೆ ಕಾಲುದಾರಿ ಬರುತ್ತದೆ. ನಾವು ಅಲ್ಲಿ ನಿಂತ ಅಂದಾಜು 5 ನಿಮಿಷಕ್ಕೆ ನಾನು ಹೇಳಿದಂತ ವ್ಯಕ್ತಿಗಳು ಬಂದರು. ನನಗೆ ಬೈಕ್‌ನಲ್ಲಿ ಮಾಂಸ ಒಯ್ಯಲು ಬಂದಿರುತ್ತಾರೆ ಎಂದು ಹೇಳಿರುವುದಿಲ್ಲ. ನಾವು ಬಾಳೆಗುಳಿಯಿಂದ ಆ ಜಾಗಕ್ಕೆ ಬರುವ ತನಕ ಬೈಕ್‌ಗಳನ್ನು ತಪಾಸಣೆ ಮಾಡಿಕೊಂಡು ಬಂದಿರುವುದಿಲ್ಲ.

21. ನಾನು ಮತ್ತು ಚಾಸಾ.6 ರವರು 3 ನೇ ಆರೋಪಿಯನ್ನು ಹಿಡಿದಿರುತ್ತೇವೆ. ಚಾಸಾ.5 ಮತ್ತು 7 ರವರು 2 ನೇ ಆರೋಪಿಯನ್ನು ಹಿಡಿದಿರುತ್ತಾರೆ. ಅವರನ್ನು ಯಾರ್ಯಾರು ಹಿಡಿದರು ಎಂದು ನನ್ನ ದೂರು ಹೇಳಿಕೆಯಲ್ಲಿ ಹೇಳಲು ಹಾಗೂ ಪಂಚನಾಮೆಯಲ್ಲಿ ಹೇಳಲು ತೊಂದರೆ ಇರಲಿಲ್ಲ. ಹಣವನ್ನು ಜಪ್ತು ಪಡಿಸಿಕೊಂಡಿಲ್ಲ. ಮಾಂಸ ಬಿಳಿ ಬಣ್ಣದ ಚೀಲದಲ್ಲಿ ಇತ್ತು. ಆ ಚೀಲ ಸಿಮೇಂಟ್ ಚೀಲ ಆಗಿತ್ತು. ಆ ವಿಚಾರವನ್ನು ದೂರಿನಲ್ಲಿ ಮತ್ತು ಮಹಜರ್ ನಲ್ಲಿ ಹೇಳಲು ತೊಂದರೆ ಇರಲಿಲ್ಲ. ನಾನು ಮುಂದುವರಿದ ಹೇಳಿಕೆಯಲ್ಲೂ ಹೇಳಿಲ್ಲ. ನಾನು ಹೇಳಿದಂತ ಮಾಂಸ ರಕ್ತಸಿಕ್ತವಾಗಿತ್ತು. ಚೀಲ ಕೂಡ ರಕ್ತಸಿಕ್ತ ವಾಗಿತ್ತು.

22. ಅವರು ನಮ್ಮನ್ನು ನೋಡಿ 10 ರಿಂದ 15 ಮೀಟರ್ ದೂರ ಅರಣ್ಯದೊಳಗೆ ಓಡಿರುತ್ತಾರೆ. ಬೈಕ್‌ಗೆ ರಕ್ತ ಅಂಟಿರಲಿಲ್ಲ. ನಾವು ಜಪ್ತು ಮಾಡಿದೆವು ಎಂದು ಹೇಳುವ ಮೊಬೈಲ್‌ನಿಂದ 4 ಮತ್ತು 5 ನೇ ಆರೋಪಿಗಳಿಗೆ ಕರೆ ಹೋಗಿದೇಯಾ ಎಂದು ಆ ಮೊಬೈಲ್‌ಗಳನ್ನು ಪರಿಶೀಲಿಸಿರುವುದಿಲ್ಲ. ಬಂಧಿಸಿದೇವು ಎಂದು ಹೇಳುವ ಇಬ್ಬರು ಆರೋಪಿಗಳ ಮೊಬೈಲ್‌ಗಳ ಮಧ್ಯೆ ಕರೆ ವಿನಿಮಯ ಆಗಿದೇಯಾ ಎಂದು ಆ ಮೊಬೈಲ್‌ಗಳನ್ನು ಪರಿಶೀಲಿಸಿಲ್ಲ. ಆ ರೀತಿ ಪರಿಶೀಲನೆ ಮಾಡದೆ ಆ ಮೊಬೈಲ್‌ಗಳನ್ನು ನಮ್ಮ ಪ್ರಕಾರ ಜಪ್ತು ಮಾಡಿದ್ದೆವೆ. ಆ ಮೊಬೈಲ್‌ಗಳನ್ನು ಬಟ್ಟೆ ಸುತ್ತಿ, ಇಲಾಖಾ ಮೊಹರು ಹಾಕಿ ಪಂಚರ ಮತ್ತು ನಮ್ಮ ಸಹಿ ಇರುವ ಚೀಟಿ ಅಂಟಿಸಿ ಜಪ್ತು ಮಾಡಿಲ್ಲ. ಯಾವುದೇ ವಸ್ತುಗಳನ್ನು ಜಪ್ತು ಮಾಡಿದಾಗ ಆ ರೀತಿ ಕ್ರಮ ಜರುಗಿಸಬೇಕು ಎಂದರೆ ಸಾಕ್ಷಿ ಬೇಕಿಲ್ಲ, ಹಾಗೆ ತೆಗೆದುಕೊಂಡು ಹೋಗುತ್ತೇವೆ ಎಂದು ನುಡಿಯುತ್ತಾರೆ. ಜಪ್ತು ಮಾಡುವುದು ಎಂದರೆ ನನ್ನ ಪ್ರಕಾರ ಅವುಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವುದೆ ಜಪ್ತಾಗಿರುತ್ತದೆ. ನಾನು 10 ರಿಂದ 15 ಪ್ರಕರಣಗಳಲ್ಲಿ ಜಪ್ತು ಕ್ರಮ ಮಾಡಿರುತ್ತೇನೆ.

23. ಪಂಚರ ಸಹಿಗಳನ್ನು ನಾನು ವಶಪಡಿಸಿಕೊಂಡೆ ಎಂದು ಹೇಳುವ ವಸ್ತುಗಳ ಮೇಲೆ ಪಡೆದುಕೊಂಡಿರುವುದಿಲ್ಲ. ಮೇಲೆ ಹೇಳಿದಂತ ಕ್ರಮದ ಪ್ರಕಾರ ಜಪ್ತು ಪಡಿಸಲು ನನಗೆ ತೊಂದರೆ ಇರಲಿಲ್ಲ. ನನ್ನ ಪ್ರಕಾರ ಪಂಚನಾಮೆ ಬರೆದು ಪಂಚನಾಮೆಗೆ ಸಹಿ ಮಾಡಿರುವುದು ಆಗಿರುತ್ತದೆ. ನಾನು ಹೇಳುವಂತ ಮಾಂಸ ಇತ್ತು ಎಂದು ಹೇಳುವ ಕೈ ಚೀಲಕ್ಕೂ ಕೂಡ ಪಂಚರ ಸಹಿ ಪಡೆದಿಲ್ಲ. ನಾವು ಜಪ್ತು ಮಾಡಿದೆ ಎಂದು ಹೇಳುವ ವಸ್ತುಗಳನ್ನು ತನಿಖಾಧಿಕಾರಿಯ ಮುಂದೆ ಹಾಜರು ಪಡಿಸಿರುತ್ತೇನೆ.

ಪಂಚರನ್ನು ಬರಲು ಆರ್ ಎಫ್ ಒ ರವರು ಕರೆಸಿರುತ್ತಾರೆ. ಆ ದಿನ ಅಲ್ಲಿ ಸ್ಥಳಿಕರನ್ನಾಗಲಿ, ವಾಹನ ಚಾಲಕರನ್ನಾಗಲಿ ಹಾಗೂ ದೇವಸ್ಥಾನಕ್ಕೆ ಬಂದವರನ್ನಾಗಲಿ ಪಂಚರಾಗಿ ಸಹಕರಿಸಲು ನಾನು ಕೋರಿರುವುದಿಲ್ಲ. ಅದೇ ರೀತಿ ವಿಲೇಜ್ ಫಾರೆಸ್ಟ್ ಕಮಿಟಿಯ ಸದಸ್ಯರು ಹಾಗೂ ಅಧ್ಯಕ್ಷರನ್ನು ಕೂಡ ಪಂಚನಾಮೆಗೆ ಪಂಚರಾಗಿ ಸಹಕರಿಸಲು ಆ ದಿನ ಕೋರಿರುವುದಿಲ್ಲ. ಸಾಮಾನ್ಯವಾಗಿ ಪಂಚರಾಗಿ ಸ್ಥಳಿಯರನ್ನು ಕರೆಸಿಕೊಳ್ಳಬೇಕು ಎಂಬ ವಿಚಾರ ನನಗೆ ತಿಳಿದಿತ್ತು. ನಾನು ಹೇಳಿದಂತ ಪಂಚರಿಗೆ ಪಂಚನಾಮೆಯನ್ನು ಬರೆಯಿರಿ ಎಂದು ಹೇಳಲು ನನಗೆ ತೊಂದರೆ ಇರಲಿಲ್ಲ. ಪಂಚನಾಮೆಯಲ್ಲಿರುವ ಹೇಳಿಕೆಗಳನ್ನು ನನ್ನ ಹೇಳಿಕೆಯ ಮೇರೆಗೆ ನಮೂದಿಸಿದ್ದು ಎಂದರೆ ಸಾಕ್ಷಿ ಪಂಚರ ಹೇಳಿಕೆಯ ಮೇರೆಗೆ ಮಾಡಿದ್ದು ಎಂದು ನುಡಿಯುತ್ತಾರೆ.

(ವಕೀಲರ ವಿನಂತಿಯ ಮೇರೆಗೆ ಮುಂದುವರಿದ ಪಾಟಿ ಸವಾಲನ್ನು ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.